ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಆಯುಕ್ತರವರ ಕಛೇರಿ, ನರಸಿಂಹರಾಜ ಚೌಕ, ಬೆಂಗಳೂರು – 560 002

ಸಂಖ್ಯೆ: ಹೆನಿನಯೋ/ಪಿಆರ್/ 481 /2015-16 ದಿನಾಂಕ: 03-09-2015

# ಸುತ್ತೋಲೆ

ವಿಷಯ: ಕಟ್ಟಡ ನಿರ್ಮಾಣ ಯೋಜನೆಗಳನ್ನು ಸಿದ್ಧಪಡಿಸುವ, ವಿನ್ಯಾಸಗೊಳಿಸುವ ಮತ್ತು ಮೇಲ್ವಿಚಾರಣೆ ಮಾಡುವ ತಾಂತ್ರಿಕ ಪರಿಣಿತರ ನೋಂದಣಿ ಮಾಡಲು ವಿಧಿಸಲಾಗುವ ನೋಂದಣಿ ಶುಲ್ಕವನ್ನು ಪರಿಷ್ಕರಿಸುವ ಬಗ್ಗೆ

ಉಲ್ಲೇಖ: 1. ಪಾಲಿಕೆಯ ಸುತ್ತೋಲೆ ಸಂಖ್ಯೆ: ಜೆಡಿಟಿಪಿ/ಸಿ2/ಪಿಆರ್/54/07-08, ದಿನಾಂಕ 18-12-2007

2. ಪಾಲಿಕೆಯ ಮಾನ್ಯ ಆಡಳಿತಗಾರರು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರವನ್ನು ಚಲಾಯಿಸಿ ಕೈಗೊಂಡ ನಿರ್ಣಯದ ವಿಷಯ ಸಂಖ್ಯೆ: 152/2015-16, ದಿನಾಂಕ: 25-08-2015

*******

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಕಟ್ಟಡ ನಕ್ಷೆ ತಯಾರಿಕೆ, ಯೋಜನೆಗಳನ್ನು ವಿನ್ಯಾಸಗೊಳಿಸುವುದು, ಇತ್ಯಾದಿ ತಾಂತ್ರಿಕ ಕೆಲಸಗಳನ್ನು ನಿರ್ವಹಿಸುವ ಖಾಸಗಿ ಪರಿಣಿತರ ಪ್ರತಿ 5 ವರ್ಷಗಳ ಅವಧಿಯ ನೋಂದಣಿ ಮತ್ತು ನವೀಕರಣಕ್ಕೆ ಸಂಬಂಧಿಸಿದಂತೆ ಉಲ್ಲೇಖ (1) ರಲ್ಲಿನ ಸುತ್ತೋಲೆಯಂತೆ ಶುಲ್ಕಗಳನ್ನು ಪಾವತಿಸಿಕೊಳ್ಳಲಾಗುತ್ತಿತ್ತು.

ಆದರೆ, ಈಗಾಗಲೇ ಸುಮಾರು 8 ವರ್ಷಗಳ ಹಿಂದೆ ನೋಂದಣಿ ಶುಲ್ಕಗಳನ್ನು ನಿಗಧಿಪಡಿಸಲಾಗಿದ್ದು, ಈ ಅವಧಿಯಲ್ಲಿ ಸ್ವತ್ತುಗಳ ನೋಂದಣಿ ಶುಲ್ಕ ಸೇರಿದಂತೆ ಅಂದಿನಿಂದ ಇಂದಿನಿರವರೆವಿಗೆ ಬದುಕಿನ ಸಾಮಾನ್ಯ ದರಗಳು, ಬೆಲೆಗಳು, ಇತರೇ ಸೇವೆಗಳ ದರಗಳಲ್ಲಿಯೂ ಸಹ ಎಲ್ಲಾ ಹಂತಗಳಲ್ಲಿಯೂ ಸುಮಾರು ಪಟ್ಟು ಹೆಚ್ಚಳವಾಗಿರುತ್ತದೆ. ನೋಂದಾಯಿಸಲ್ಪಟ್ಟಿರುವ ವಾಸ್ತುಶಿಲ್ಪಿ / ಇಂಜನಿಯರ್ / ಮೇಲ್ವಿಚಾರಕರುಗಳು ಸಹಾ ತಮ್ಮ ಸೇವೆಗಳಿಗೆ ಪಡೆಯುವ ಸಂಭಾವನೆಯಲ್ಲಿಯೂ ಸಹ ಗಣನೀಯ ಹೆಚ್ಚಳವಿರುತ್ತದೆ. ಆದಾಗ್ಯೂ ಪಾಲಿಕೆಯ ಆದಾಯಕ್ಕೆ ಹೋಲಿಸಿದಲ್ಲಿ ವೆಚ್ಚದ ಪ್ರಮಾಣ ದಿನೇ ದಿನೇ ಹೆಚ್ಚಳವಾಗುತ್ತಿದ್ದು, ಈ ವ್ಯತ್ಯಾಸ ಸಮತೋಲನಕ್ಕಾಗಿ ಪಾಲಿಕೆಯ ವಿವಿಧ ಮೂಲಗಳ ಆರ್ಥಿಕ ಸಂಪನ್ಮೂಲಗಳನ್ನು ವೈಜ್ಞಾನಿಕವಾಗಿ ಕ್ರೋಢೀಕರಿಸುವುದು ಪಾಲಿಕೆಯ ಪ್ರಸ್ತುತ ಆದ್ಯತೆಯಾಗಿರುವುದರಿಂದ, ಪ್ರಸ್ತುತ ಉಲ್ಲೇಖ (2) ರ ಮಾನ್ಯ ಆಡಳಿತಗಾರರ ನಿರ್ಣಯದಲ್ಲಿ ತಾಂತ್ರಿಕ ಪರಿಣಿತರ ನೋಂದಣಿ / ನವೀಕರಣ / ಮರು ನೋಂದಣಿಗೆ ಸಂಬಂಧಿಸಿದಂತೆ ಶುಲ್ಕಗಳನ್ನು ಪರಿಷ್ಕರಿಸಿ ಅನುಮೋದಿಸಲಾಗಿರುತ್ತದೆ.

ಆದುದರಿಂದ, ಉಲ್ಲೇಖ (2) ರ ಮಾನ್ಯ ಆಡಳಿತಗಾರರು ರವರ ನಿರ್ಣಯದಲ್ಲಿ ಅನುಮೋದಿಸಲಾದಂತೆ ತಾಂತ್ರಿಕ ಪರಿಣಿತರ ನೋಂದಣಿ / ನವೀಕರಣ / ಮರು ನೋಂದಣಿಗೆ ಸಂಬಂಧಿಸಿದ ಶುಲ್ಕಗಳನ್ನು ಈ ಕೆಳಕಂಡಂತೆ ನಿಗಧಿಪಡಿಸಲಾಗಿದೆ.

| ಕ್ರಮ ಸಂಖ್ಯೆ | ತಾಂತ್ರಿಕ ವರ್ಗ | ಮೊದಲ ನೋಂದಣಿಗೆ ಶುಲ್ಕ (ರೂ. ಗಳಲ್ಲಿ) | ನೋಂದಣಿ ನವೀಕರಣ / ಮರು ನೋಂದಣಿಗೆ ಶುಲ್ಕ (ರೂ. ಗಳಲ್ಲಿ) |
|---|---|---|---|
| 1 | ಮೇಲ್ವಿಚಾರಕರು | 5,000/- | 10,000/- |
| 2 | ಇಂಜನಿಯರ್ / ವಾಸ್ತುಶಿಲ್ಪಿ | 10,000/- | 20,000/- |
| 3 | ಸ್ಟ್ರಕ್ಚರಲ್ ಇಂಜನಿಯರ್ | 15,000/- | 30,000/- |

ಉಲ್ಲೇಖ (1) ರಲ್ಲಿ ತಾಂತ್ರಿಕ ಪರಿಣಿತರ ನೋಂದಣಿ / ನವೀಕರಣಕ್ಕೆ ಸಂಬಂಧಿಸಿದಂತೆ ನಿಗಧಿಪಡಿಸಿದ್ದ ಶುಲ್ಕಗಳ ಬದಲಾಗಿ, ಮೇಲ್ಕಂಡಂತೆ ಶುಲ್ಕಗಳನ್ನು ತತ್‌ಕ್ಷಣದಿಂದ ಹಾಗೂ ಮುಂದಿನ ಆದೇಶದವರೆಗೆ ಪಾವತಿಸಿಕೊಳ್ಳಲು ಆದೇಶಿಸಿದೆ.

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು:

1. ಮಾನ್ಯ ಆಡಳಿತಗಾರರು ಅವಗಾನೆಗೆ ಸಲ್ಲಿಸಲು ಆಪ್ತ ಶಾಖೆಗೆ ಕಳುಹಿಸಿದೆ.
2. ಮಾನ್ಯ ಆಯುಕ್ತರವರ ಅವಗಾನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
3. ವಿಶೇಷ ಆಯುಕ್ತರು (ಯೋಜನೆಗಳು / ಹಣಕಾಸು) ರವರ ಮಾಹಿತಿಗಾಗಿ
4. ಪ್ರಧಾನ ಅಭಿಯಂತರರು ರವರ ಮಾಹಿತಿಗಾಗಿ
5. ಅಪರ ನಿರ್ದೇಶಕರು (ನಗರ ಯೋಜನೆ) ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
6. ಮುಖ್ಯಸ್ಥರು, ಕಾನೂನು ಕೋಶ ರವರ ಮಾಹಿತಿಗಾಗಿ.
7. ಜಂಟಿ ಆಯುಕ್ತರು ಪೂರ್ವ / ಪಶ್ಚಿಮ / ದಕ್ಷಿಣ/ ಬ್ಯಾಟರಾಯನಪುರ / ಮಹದೇವಪುರ / ದಾಸರಹಳ್ಳಿ / ರಾಜರಾಜೇಶ್ವರಿ ನಗರ/ ಬೊಮ್ಮನಹಳ್ಳಿ, ರವರ ಮಾಹಿತಿಗಾಗಿ
8. ಎಲ್ಲಾ ಮುಖ್ಯ ಅಭಿಯಂತರರುಗಳಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ
9. ಜಂಟಿ ನಿರ್ದೇಶಕರು ನಗರ ಯೋಜನೆ, (ಉತ್ತರ ಮತ್ತು ದಕ್ಷಿಣ) ರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ
10. ಸಹಾಯಕ ನಿರ್ದೇಶಕರು (ನಗರ ಯೋಜನೆ) ಪೂರ್ವ / ಪಶ್ಚಿಮ / ದಕ್ಷಿಣ/ ಬ್ಯಾಟರಾಯನಪುರ / ಮಹದೇವಪುರ / ದಾಸರಹಳ್ಳಿ / ರಾಜರಾಜೇಶ್ವರಿ ನಗರ/ ಬೊಮ್ಮನಹಳ್ಳಿ, ರವರ ಮಾಹಿತಿಗಾಗಿ